# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಉಅಸಂ/ಪಿಆರ್/1349/2020-21

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಎನ್.ಆರ್.ಸ್ಕ್ವೇರ್, ಅನೆಕ್ಸ್ ಬಿಲ್ಡಿಂಗ್-3
ಬೆಂಗಳೂರು, ದಿನಾಂಕ:18.12.2020.

## ಕಛೇರಿ ಅಧಿಕೃತ ಜ್ಞಾಪನಾ ಪತ್ರ

*ವಿಷಯ: ಬಿಬಿಎಂಪಿ ಪೂರ್ವ ವಲಯದ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸುತ್ತಿರುವ ಹಳೆ ವಿಮಾನ ನಿಲ್ದಾಣ ರಸ್ತೆಯ ಎ.ಎಸ್.ಪಿ ಕಮ್ಯಾಂಡೋ ಆಸ್ಪತ್ರೆಯಿಂದ ವಿಂಡ್‌ಟವರ್ ರಸ್ತೆ ಜಂಕ್ಷನ್, ಸುರಂಜನದಾಸ್ ರಸ್ತೆ ಜಂಕ್ಷನ್ ಕುಂದಲಹಳ್ಳಿ ಜಂಕ್ಷನ್ ಮುಖಾಂತರ ಹೊಪ್ ಫಾರಂ, ಜಂಕ್ಷನ್‌ರವರೆಗೆ ಸಿಗ್ನಲ್ ಮುಕ್ತ ಕಾರಿಡಾರ್ ಯೋಜನೆಗೆ ಅಡ್ಡಬರುವ ಮರಗಳ ಉಳಿಸುವಿಕೆ/ತೆರವು/ಮರುನಾಟಿ/*

ಉಲ್ಲೇಖ: 1. ಕಾರ್ಯಪಾಲಕ ಅಭಿಯಂತರರು ಇವರ ಪತ್ರ ಸಂ: ಕಾ.ಪಾ.ಅ/(ಯೋ.ಕೇ-4) ಪಿಆರ್-67 2017-18 ದಿ: 12.7.2018.

*******

**ಪ್ರಸ್ತಾವನೆ:**

ಕಾರ್ಯಪಾಲಕ ಅಭಿಯಂತರರು (ಯೋಜನೆ ಕೇಂದ್ರ-4) ಪೂರ್ವ ವಲಯ ಇವರು ಉಲ್ಲೇಖದಡಿಯಲ್ಲಿನ ಪತ್ರದಲ್ಲಿ *ಪೂರ್ವ ವಲಯದ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸುತ್ತಿರುವ ಹಳೆ ವಿಮಾನ ನಿಲ್ದಾಣ ರಸ್ತೆಯ ಎ.ಎಸ್.ಪಿ ಕಮ್ಯಾಂಡೋ ಆಸ್ಪತ್ರೆಯಿಂದ ವಿಂಡ್‌ಟವರ್ ರಸ್ತೆ ಜಂಕ್ಷನ್, ಸುರಂಜನದಾಸ್ ರಸ್ತೆ ಜಂಕ್ಷನ್ ಕುಂದಲಹಳ್ಳಿ ಜಂಕ್ಷನ್ ಮುಖಾಂತರ ಹೊಪ್ ಫಾರಂ, ಜಂಕ್ಷನ್‌ರವರೆಗೆ ಸಿಗ್ನಲ್ ಮುಕ್ತ ಕಾರಿಡಾರ್ ಯೋಜನೆ* ಕಾಮಗಾರಿಗೆ ಅಡ್ಡಬರುವ ಮರಗಳ ತೆರವಿಗೆ (ಉಲ್ಲೇಖ -1) ಅರ್ಜಿ ಸಲ್ಲಿಸಿ ಅನುಮತಿ ಕೋರಿರುತ್ತಾರೆ. ಅದರಂತೆ ಸ್ಥಳ ಪರಿಶಿಲಿಸಿ ನೋಡಲಾಗಿ ಸರ್ಕಾರವು ಸಾರ್ವಜನಿಕ ಹಿತದೃಷ್ಟಿಯಿಂದ ನಿರ್ಮಿಸಲಾಗುತ್ತಿರುವ ಕಾಮಗಾರಿಗೆ ವಿವಿದ ಜಾತಿಯ ಮರಗಳು ಅಡ್ಡಬರುತ್ತಿರುವುದು ಪರಿಶಿಲನೆಯಿಂದ ದೃಡಪಟ್ಟಿರುತ್ತದೆ. ಅದರಂತೆ ಮರಗಳ ಎಣಿಕೆ ಪಟ್ಟಿ ತಯಾರಿಸಿದ್ದು, ಸದರೀ ಪ್ರಸ್ತಾವನೆಯನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ನಿರ್ದೇಶನದ ಪ್ರಕಾರ ವೃಕ್ಷ ತಜ್ಞರ ಸಮಿತಿಯ ಮುಂದೆ ಮಂಡಿಸಿ ಅವರಿಂದ ಸ್ಥಳ ಪರಿಶೀಲನಾ ವರದಿ ನಂತರ ಸಮಿತಿಯು ನೀಡುವ ಮಾರ್ಗದರ್ಶನದಂತೆ ವೃಕ್ಷಾಧಿಕಾರಿಯವರು ಕ್ರಮ ವಹಿಸಬೇಕಾಗಿರುತ್ತದೆ. ಅದರಂತೆ ಮರಗಳ ತೆರವಿನ ಬಗ್ಗೆ ಸಮಿತಿಯ ಮುಂದೆ ಮಂಡಿಸಲಾಯಿತು. ಆದ್ದರಿಂದ ಸಮಿತಿಯ ನಡಾವಳಿಗಳು 26.5.2020 ರಲ್ಲಿ ನೀಡಿರುವ ಮಾರ್ಗದರ್ಶನದಂತೆ ಹಾಗೂ ವೃಕ್ಷ ತಜ್ಞರ ಸಮಿತಿಯ ಸ್ಥಳ ಪರಿಶೀಲನಾವರದಿಯಂತೆ, ಕ್ರಮವಹಿಸಲು ತೀರ್ಮಾನಿಸಿದೆ.

## *ಆದೇಶ:*

ಮೇಲೆ ವಿವರಿಸಿರುವ ಕಾರಣಗಳು ಹಾಗೂ ವೃಕ್ಷಾಧಿಕಾರಿಯವರಿಗೆ ಕರ್ನಾಕ ವೃಕ್ಷ ಸಂರಕ್ಷಣಾ ಕಾಯ್ದೆ, 1976ರ ಕಲಂ (8) 3 ರಡಿ ಪ್ರದತ್ತವಾದ ಅಧಿಕಾರ ಹಿನ್ನಲೆಯಲ್ಲಿ ಪೂರ್ವ ವಲಯದ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸುತ್ತಿರುವ ***ಹಳೆ ವಿಮಾನ ನಿಲ್ದಾಣ ರಸ್ತೆಯ ಎ.ಎಸ್.ಪಿ ಕಮ್ಯಾಂಡೋ ಆಸ್ಪತ್ರೆಯಿಂದ ವಿಂಡ್‌ಟವರ್ ರಸ್ತೆ ಜಂಕ್ಷನ್, ಸುರಂಜನದಾಸ್ ರಸ್ತೆ ಜಂಕ್ಷನ್ ಕುಂದಲಹಳ್ಳಿ ಜಂಕ್ಷನ್ ಮುಖಾಂತರ ಹೊಪ್ ಫಾರಂ, ಜಂಕ್ಷನ್‌ರವರೆಗೆ ಸಿಗ್ನಲ್ ಮುಕ್ತ ಕಾರಿಡಾರ್*** ಕಾಮಗಾರಿಗೆ 48 ಪೈಕಿ 16 ಮರಗಳು ಸ್ಥಳದಲ್ಲಿ ಉಳಿಯುವಿಕೆ, 07 ಮರಗಳು ಮರುನಾಟಿ, 25 ಮರಗಳ ಕತ್ತಾವಣೆ ಆದೇಶ ನೀಡಲು ವೃಕ್ಷ ತಜ್ಞರ ಸಮಿತಿಯ ಸ್ಥಳಪರಿಶೀಲನಾವರದಿಯಲ್ಲಿ ನೀಡಿರುವ ಕಾರಣದಂತೆ, ಮರಗಳಲ್ಲಿ ಮರುನಾಟಿ ಮತ್ತು ಕತ್ತಾವಣೆ ಮಾಡಬೇಕಾದ ಮರಗಳ ಸಂಖ್ಯೆ, ಜಾತಿ ಇತ್ಯಾದಿ ವಿವರ ಮತ್ತು ಷರತ್ತುಗಳೊಂದಿಗೆ, ಮರುನಾಟಿ ಮತ್ತು ಕತ್ತಾವಣೆ ಆದೇಶ ನೀಡಲಾಗಿದೆ. ವಿವರಗಳನ್ನು ಅನುಬಂಧ-1, ಅನುಬಂಧ-2 ಮತ್ತು ಅನುಬಂಧ-3ರಲ್ಲಿ ನೀಡಲಾಗಿದೆ.

**ಘೊಷ್ವಾರೆ:**

| | |
|---|---|
| **ಒಟ್ಟು ಮರಗಳ ಸಂಖ್ಯೆ:** | **-48** |
| 1. ಉಳಿಸಲಾದ ಮರಗಳ ಸಂಖ್ಯೆ: | -16 -ಅನುಬಂದ-1 |
| 2. ಮರುನಾಟಿ ಮಾಡಬೇಕಾದ ಮರಗಳ ಸಂಖ್ಯೆ: | -7 -ಅನುಬಂಧ-2 |
| 3. ಕತ್ತಾವಣೆಮಾಡಬೇಕಾದ ಮರಗಳ ಸಂಖ್ಯೆ: | -25 – ಅನುಬಂಧ-3 |

**ಷರತ್ತುಗಳು:**

- ಮರುನಾಟಿ ಕಾರ್ಯವನ್ನು ಅರಣ್ಯ ಸಿಬ್ಬಂದಿಗಳ ಸೂಕ್ತ ತಾಂತ್ರಿಕ ಮೇಲ್ವಿಚಾರಣೆಯಲ್ಲಿ ಅವರ ಸಲಹೆ ಸೂಚನೆಯಂತೆ ಕೈಗೊಳ್ಳತಕ್ಕದ್ದು.
- ಮರುನಾಟಿ ಮಾಡಬೇಕಾದ ಮರಗಳನ್ನು ವ್ಯಕ್ತಿ/ಸಂಸ್ಥೆಯ ಸಹಾಯದಿಂದ ಸ್ಥಳಾಂತರಿಸಿ ಅದನ್ನು ಸೂಕ್ತವಾದ ಸ್ಥಳವನ್ನು ಆರಿಸಿದ ನಂತರ, ಅರಣ್ಯಾಧಿಕಾರಿಗಳೊಂದಿಗೆ ಪರಿಶೀಲಿಸಿದ ನಂತರ ಮರುನಾಟಿಮಾಡುವುದು, ಮರುನಾಟಿಮಾಡಿ ಕನಿಷ್ಠ 3 ವರ್ಷಗಳ ಅವಧಿಯವರೆಗೆ ನಿರ್ವಹಣೆಮಾಡಬೇಕು.
- ಮರುನಾಟಿ ಕಾರ್ಯವನ್ನು ಕೈಗೊಳ್ಳುವ ವ್ಯಕ್ತಿ/ಸಂಸ್ಥೆಯು ಮರುನಾಟಿಮಾಡಲು ಅರ್ಹತೆ ಹೊಂದಿರತಕ್ಕದ್ದು ಹಾಗೂ ಅವರುಗಳ ಹೆಸರು ವಿಳಾಸ ಮತ್ತು ಮರುನಾಟಿಮಾಡದ ಮರದ ಸಂಖ್ಯೆಯೊಂದಿಗೆ ಮರದ ಛಾಯಾಚಿತ್ರಗಳನ್ನು ಇತ್ಯಾದಿಗಳನ್ನು ದಾಖಲೆ ರೂಪದಲ್ಲಿ ಸಂಗ್ರಹಿಸಿಡಬೇಕು.
- ಆದೇಶದಲ್ಲಿ ತಿಳಿಸಿರುವಂತೆ ಕತ್ತಾವಣೆಮಾಡುವ ಪತ್ರೀ ಮರಗಳ ಬದಲಿಗೆ ನೆಡುತ್ತಿರುವ (3) ಸಸಿಗಳ ವಿವರಗಳನ್ನು ಛಾಯಾಚಿತ್ರದೊಂದಿಗೆ ಕಛೇರಿಗೆ ಸಲ್ಲಿಸುವುದು.
- ತೆರವುಗೊಳಿಸಲಾದ ಪ್ರತೀ ಮರದ ಬದಲಿಗೆ ಎತ್ತರದ ಹಾಗೂ ಉತ್ತಮ ಜಾತಿಯ ಕನಿಷ್ಟ 3 ಸಸಿಗಳನ್ನು ಸೂಕ್ತ ಸ್ಥಳದಲ್ಲಿ ನೆಟ್ಟು 3 ವರ್ಷಗಳವರೆಗೆ ನಿರ್ವಹಿಸಬೇಕು
- ಉಳಿಸಲಾಗುತ್ತಿರುವ ಮರಗಳಿಗೆ ಯಾವುದೇ ಹಾನಿಯಾಗದಂತೆ ಕಾಮಗಾರಿಯನ್ನು ನಿರ್ವಹಿಸುವುದು.

18/12/20

ವೃಕ್ಷಾಧಿಕಾರಿಗಳು ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಪ್ರತಿಯನ್ನು:-

1. ಕಾರ್ಯಪಾಲಕ ಅಭಿಯಂತರರು (ಯೋಜನೆ ಕೇಂದ್ರ-4) ಪೂರ್ವ ವಲಯ ಇವರಿಗೆ ಮಾಹಿತಿಗೆ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
2. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಬಿಬಿಎಂಪಿ ಇವರ ಮಾಹಿತಿಗೆ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
3. ವಲಯ/ಉಪ ವಲಯ ಅರಣ್ಯಾಧಿಕಾರಿ ಪೂರ್ವ ವಲಯ ಇವರ ಮಾಹಿರಿಗೆ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.